# ಧರ್ಮಸ್ಥಳ ಗೊಮ್ಮಟಮೂರ್ತಿಗೆ
# ಮಹಾಮಸ್ತಕಾಭಿಷೇಕ

**ಧರ್ಮಸ್ಥಳದ ಬಾಹುಬಲಿ ಸ್ವಾಮಿಗೆ ಫೆಬ್ರುವರಿ 8ರಿಂದ 19ರವರೆಗೆ ಮಹಾಮಸ್ತಕಾಭಿಷೇಕ. ಇದು ರತ್ನಗಿರಿಯ ಗೊಮ್ಮಟನಿಗೆ ನಡೆಯುತ್ತಿರುವ ಚತುರ್ಥ ಮಹಾಮಸ್ತಕಾಭಿಷೇಕ ಮಹೋತ್ಸವ.**

■ **ಕೋಡಿಬೆಟ್ಟು ರಾಜಲಕ್ಷ್ಮಿ**

ಚಿತ್ರಗಳು: ಜನನಿ, ಧರ್ಮಸ್ಥಳ



ಶ್ರವಣಬೆಳಗೊಳದ ವಿಶ್ವಪ್ರಸಿದ್ಧ ಗೊಮ್ಮಟನ ಮಹಾಮಸ್ತಕಾಭಿಷೇಕ ಸಂಭ್ರಮದ ರಂಗು ಇನ್ನೂ ಹಸಿರಾಗಿರುವಾಗಲೇ, ಧರ್ಮಸ್ಥಳದಲ್ಲಿ ಅಭಿಷೇಕದ ಹೊಸ ಪರ್ವ ಆರಂಭಗೊಂಡಿದೆ. ರತ್ನಗಿರಿಯಲ್ಲಿ ನಿಂತಿರುವ ಬಾಹುಬಲಿಗೆ ಫೆ. 8ರಿಂದ 19ರವರೆಗೆ ವಿರಾಗಮೂರ್ತಿ ಹಲವು ರಂಗುಗಳಲ್ಲಿ ಕಂಗೊಳಿಸಲಿದ್ದಾನೆ.

ಇಪ್ಪತ್ತನೇ ಶತಮಾನದ ಅದ್ಭುತಗಳಲ್ಲೊಂದೆಂದು ಬಣ್ಣಿಸಲಾಗುತ್ತಿರುವ ಬಾಹುಬಲಿ ಅಭಿಷೇಕದಲ್ಲಿ ದೀಪೋತ್ಸವ, ಜಾತ್ರೆ, ನಡಾವಳಿಗಳು ನಡೆಯಲಿದ್ದು, ಈ ಸಡಗರದಲ್ಲಿ ನೂರಾರು ಸಾಧು–ಸಂತರು, ಮಾತಾಜಿಗಳು ಭಾಗವಹಿಸುತ್ತಿದ್ದಾರೆ.

ಧರ್ಮಸ್ಥಳದಲ್ಲಿ ವಿರಾಟ್ ವಿರಾಗಿಯ ಮೂರ್ತಿಯೊಂದನ್ನು ನಿಲ್ಲಿಸುವ ನಿಶ್ಚಯ ಮಾಡಿದವರು ಪ್ರಸ್ತುತ ಧರ್ಮಾಧಿಕಾರಿ ಆಗಿರುವ ಡಿ. ವೀರೇಂದ್ರ ಹೆಗ್ಗಡೆ ಅವರ ತಂದೆ ದಿವಂಗತ ರತ್ನವರ್ಮ ಹೆಗ್ಗಡೆ. ಜೈನ, ಶೈವ, ವೈಷ್ಣವ ಪಂಥಗಳ ಸಂಗಮ ಕ್ಷೇತ್ರವೆಂದು ಗುರುತಿಸಿಕೊಂಡಿರುವ ಧರ್ಮಸ್ಥಳದ ರತ್ನಗಿರಿ ಬೆಟ್ಟದಲ್ಲಿ

